Sri H. M. CHANNABASAPPA.—Each case has to be dealt with on its own merits.

Sulibele Tank (Removal of Silt).

Q.—411. Sri H. T. PUTTAPPA (Hoskote-Anekal—Scheduled Castes).—

Will the Government be pleased to state :—

(*a*) whether the people have requested for the removal of silt in Sulibele Tank, Sulibele Hobli, Hoskote Taluk ;

(*b*) if so, whether they have prepared any estimate for the same ?

A.—Sri H. M. CHANNABASAPPA (Minister for Industries).—

(*a*) Yes.

(*b*) Yes.

ಶ್ರೀ ಎಚ್. ಟಿ. ಪುಟ್ಟಪ್ಪ.—ಈಗ ಎಷ್ಟು ರೂಪಾಯಿನ ಅಂದಾಜು ತಯಾರಾಗಿದೆ ?

*ಶ್ರೀ ಎಚ್. ಎಂ. ಚನ್ನಬಸಪ್ಪ.—72,000 ರೂಪಾಯಿಗಳಿಗೆ ತಯಾರಾಗಿದೆ.

ಶ್ರೀ ಎಚ್. ಟಿ. ಪುಟ್ಟಪ್ಪ.—ಎಷ್ಟು ವರ್ಷವಾಯಿತು ಅಂದಾಜು ತಯಾರಾಗಿ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಈಚೆಗೆ ತಾನೆ ತಯಾರಾಗಿದೆ. ನಿರ್ದಿಷ್ಟವಾಗಿ ತಾರೀಖು ಗೊತ್ತಿಲ್ಲ.

ಶ್ರೀ ಎಚ್. ಟಿ. ಪುಟ್ಟಪ್ಪ.—ಆ ಅಂದಾಜು ಈಗ ಯಾವ ಆಫೀಸಿನಲ್ಲಿದೆ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಚೀಫ್ ಎಂಜಿನಿಯರು ಪರಿಶೀಲನೆ ಮಾಡುತ್ತಿದ್ದಾರೆ.

ಶ್ರೀ ಎಚ್. ಟಿ. ಪುಟ್ಟಪ್ಪ.—ಇದು ಬಹಳ ವರ್ಷಗಳಿಂದ ಮಂಜೂರಾಗದೆ ನಿಂತಿರುವುದರಿಂದ ಬೇಗ ಮಂಜೂರು ಮಾಡುತ್ತೀರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಬಹಳ ವರ್ಷಗಳಿಂದ ನಿಂತಿರುವುದಕ್ಕೆ ಕಾರಣ ಅಲ್ಲಿ ಕೆಲವು ತೊಂದರೆಗಳಿರುವುದು.

ಶ್ರೀ ಎಚ್. ಟಿ. ಪುಟ್ಟಪ್ಪ.—ಯಾವ ತೊಂದರೆ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಅಲ್ಲಿ ಅಚ್ಚು ಕಟ್ಟಿರುವುದು 432 ಎಕರೆಗಳು. ಕೆರೆಯ ಈಗಿನ ಕೆಪಾಸಿಟಿ 26½ ಯೂನಿಟ್ಸುಗಳು. ಇದರ ಕೋಡಿಯನ್ನು ಎರಡು ಅಡಿಗಳಷ್ಟು ಮಾತ್ರ ಎತ್ತರಿಸಬಹುದೆಂದು ತಿಳಿದು ಬಂದಿದೆ. ಇಷ್ಟಕ್ಕೇ 42,000 ರೂಪಾಯಿಗಳು ಖರ್ಚಾಗುತ್ತವೆ. ಹೆಚ್ಚಿಗೆ ಇನ್ನೂ ಒಂದೆರಡಡಿ ಜಾಸ್ತಿ ಎತ್ತರಿಸೋಣವೆಂದರೆ, ಬಹಳ ಪ್ರದೇಶ ಮುಳುಗಡೆಗೆ ಬರುತ್ತದೆ ; ಆ ಬಗ್ಗೆ ಹೆಚ್ಚಿಗೆ ಅಕ್ವಿಸಿಷ್ಟ್ ಖರ್ಚು ಕೊಡಬೇಕಾಗುತ್ತದೆ. ಇಷ್ಟೆಲ್ಲಾ ಖರ್ಚು ಮಾಡಿದರೂ ಕೇವಲ 61 ಯೂನಿಟ್ಸಿನಷ್ಟು ಮಾತ್ರ capacity ಜಾಸ್ತಿಯಾಗುತ್ತದೆ. ಆದ್ದರಿಂದ ನೀರು ನರಬರಾಯಿಗೆ ಕಷ್ಟವಾಗಬಹುದೆಂದು ತಿಳಿದು ಪರ್ಯಾಲೋಚನೆ ಮಾಡುತ್ತಿದ್ದೇವೆ.

ಶ್ರೀ ಎಚ್. ಟಿ. ಪುಟ್ಟಪ್ಪ.—ಏನಾದರೂ ಮಾಡಿ ಕೆರೆಯಿಂದ ಹೂಳು ತೆಗೆಯುವುದಕ್ಕೆ ಏರ್ಪಾಡು ಮಾಡಿದ್ದೀರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಈ ಸಂಬಂಧದಲ್ಲಿ ಒಂದು alternative proposal ಇದೆ. ಕೆರೆಯನ್ನು de-silt ಮಾಡಿ, ಆ ಹೂಳನ್ನು ಮುಳುಗಡೆಯಾಗುವ ಪ್ರದೇಶಕ್ಕೆ ಹಾಕಿ ಅಚ್ಚುಕಟ್ಟನ್ನು ಜಾಸ್ತಿ ಮಾಡುವುದಕ್ಕೆ ಸಾಧ್ಯವೇ ಎಂಬುದನ್ನು ಯೋಚನೆ ಮಾಡುತ್ತಿದ್ದೇವೆ.

AN HON'BLE MEMBER.—Is it a part of the research of the Mysore Government ?

Sri H. M. CHANNABASAPPA.—I humbly submit that this proposal is first of its kind by way of a suggestion. But anyway, according to the present proposal, as against Rs. 40,000 which has to be incurred in order to acquire the land, an expenditure of Rs. 17,000 has been incurred. It is likely that we are preventing the submersion. Anyway that question is under examination.

ಶ್ರೀ ಬಿ. ಟಿ. ಕೆಂಪರಾಜ್.—ಈಗ ತಾವು ಹೂಳು ತೆಗೆಯಿಸುವುದಕ್ಕೆ ಅಂದಾಜು ಮಾಡಿಸಿದ್ದೀರೋ ಅಥವಾ ಕೋಡಿ ಎತ್ತರಿಸುವುದಕ್ಕೆ ಅಂದಾಜು ಮಾಡಿಸಿದ್ದೀರೋ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಎರಡಕ್ಕೂ.

ಶ್ರೀ ಬಿ. ಟಿ. ಕೆಂಪರಾಜ್.—ಹೂಳು ತೆಗೆಯಿಸುವುದಕ್ಕೆ ಆಗಿರುವ ಅಂದಾಜು ಎಷ್ಟು ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಸುಮಾರು 17,000 ರೂಪಾಯಿಗಳು.

ಶ್ರೀ ಬಿ. ಟಿ. ಕೆಂಪರಾಜ್.—ಇದು ಯಾವಾಗ ಮಂಜೂರಾಗಿದೆ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಇನ್ನೂ ಮಂಜೂರಾಗಿಲ್ಲ.

ಶ್ರೀ ಬಿ. ಟಿ. ಕೆಂಪರಾಜ್.—ಅದು ಮಂಜೂರಾಗುವುದಕ್ಕೆ ಇನ್ನೂ ಎಷ್ಟು ದಿವಸವಾಗಬಹುದು ?

ಶ್ರೀ ಎಚ್. ಎಂ. ಚನ್ನಬಸಪ್ಪ.—ನಾನು ಮೊದಲೇ ಹೇಳಿದೆ. ಈ ಅನೇಕ ಕಷ್ಟ ಪರಂಪರೆಗಳಿಲ್ಲದಿದ್ದರೆ ಎಷ್ಟೋ ಮೊದಲೇ ಆಗುತ್ತಿತ್ತು. ಈಗ ಈ ಕಷ್ಟಗಳನ್ನೆಲ್ಲಾ ಪರ್ಯಾಲೋಚನೆ ಮಾಡಿ ಆದಷ್ಟು ಬೇಗನೆ ಮಾಡುತ್ತೇವೆ.

ಶ್ರೀ ಎಸ್. ಸಿದ್ದಪ್ಪ.—ಆ ಕೆರೆಯ ಹಿಂಭಾಗದಲ್ಲಿ ಪ್ರತಿ ವರ್ಷವೂ ತಪ್ಪದೇ ಫಸಲಾಗುತ್ತಿತ್ತೆಯೇ ಇಲ್ಲವೇ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ನೋಟೀಸ್ ಬೇಕು.

ಶ್ರೀ ಎಸ್. ಸಿದ್ದಪ್ಪ.—ರೈತರಿಗೆ ತೊಂದರೆಯಾಗಿರುವಾಗ, ಈ ಕೆಲಸವನ್ನು ಮಾಡಿಕೊಡುವುದರಿಂದ ಅನುಕೂಲವಾಗುವುದಾದರೆ, ಅದನ್ನು ಮಾಡಿಕೊಡುವುದು ಸರ್ಕಾರದವರ ಕರ್ತವ್ಯವಲ್ಲವೇ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಅನುಕೂಲ ಮಾಡಿಕೊಡಬೇಕೆಂಬ ಉದ್ದೇಶದಿಂದಲೇ ಇಷ್ಟೆಲ್ಲಾ ಶ್ರಮ ಪಡುತ್ತಿರುವುದು.